Duplicate

Ka21

ಕೆಲವು ಮಹಾಪುರುಷರು.

(ಐತಿಹಾಸಿಕ ಜೀವನ ಕಥೆಗಳು)

ಬರೆದವರು: ಕೆ. ವೆಂಕಟರಾಯಾಚಾರ್,
ವಿದ್ವಾನ್,
ಸುರತ್ಕಲ್ (ದ.ಕ.)

ಕೆಲವು ಮಹಾಪುರುಷರು.

ಮೊದಲ ಮಾತುಗಳು.

ವಿದ್ಯಾಭ್ಯಾಸವು ಬಾಲ್ಯದಿಂದ ತೊಡಗುವುದು. ವಿದ್ಯೆಯು ಮಾನಸಿಕ, ಬೌದ್ಧಿಕ, ದೈಹಿಕ ಮೊದಲಾದ ಯಾವತ್ತೂ ಸ್ವಶಕ್ತಿಗಳ ವಿಕಾಸವು. ಈ ಎಲ್ಲ ಗುಣಗಳು ಸಾತ್ವಿಕವಾದ ವಾತಾವರಣದಿಂದ ಪ್ರಭಾವಿತವಾದರೆ, ಮಹತ್ತಾದ ಆತ್ಮಶಕ್ತಿ ಒದಗುವುದು. ಭಾರತದಲ್ಲಿ ಆತ್ಮಶಕ್ತಿಸಂಪನ್ನರಾದ ಹಲವು ಮಹಾಪುರುಷರು ಆಗಿದ್ದರು.

ಚಾಳುಕ್ಯ ವಿಕ್ರಮಾಂಕ, ವಿಜಯನಗರದ ಕೃಷ್ಣದೇವರಾಯ, ಮಧ್ವಾಚಾರ್ಯ, ಪುರಂದರವಿಠಲ, ವೀರಪ್ಪನಾಯಕ, ಅಣ್ಣಿ ಮಂಜಣ್ಣರೆಂಬ ಆರು ಮಂದಿಯ ಜೀವನದ ಕಥೆಗಳು ಇಲ್ಲಿವೆ. ಇಬ್ಬರು ರಾಜರು, ಇಬ್ಬರು ಧಾರ್ಮಿಕ ಪ್ರಸಾರಕರು, ಇಬ್ಬರು ಸ್ವಾರ್ಥಿಕ ವೀರರುಗಳಲ್ಲಿ ಪ್ರತಿಯೊಬ್ಬನ ವಿಷಯದ ಬೃಹದ್ಗ್ರಂಥಗಳು ಹಲವಾರು ಇವೆ. ಬಾಲಕರ ಮನೋಧರ್ಮಕ್ಕೆ ತಕ್ಕಂತೆ ಅವುಗಳ ಸಮಗ್ರಾಂಗದ ಕಿರುನೋಟವು ಕಾಣವಂತೆಯೂ, ಆಯಾ ಮೂಲಗ್ರಂಥಗಳನ್ನು ಓದಲು ಕುತೂಹಲವುಂಟಾಗುವಂತೆಯೂ ಪ್ರಯತ್ನಿಸಿದ್ದೇವೆ. ವ್ಯಕ್ತಿಗಳ ರೇಖಾಚಿತ್ರಗಳೂ, ಪ್ರಶ್ನೆಗಳಂತೆ ಅಭ್ಯಾಸದ ಸೂಚನೆಗಳೂ ಇಲ್ಲಿವೆ.

ಚರಿತ್ರೆಯ ಕಥೆಗಳಿಂದ ಗುಣದೋಷಗಳು ಯಾವವೆಂಬ ವಿಚಾರವು ಮತ್ತು ವಿಮರ್ಶಶಕ್ತಿಗಳು ಅಭಿವೃದ್ಧಿ ಹೊಂದುತ್ತವೆ. ಆಯಾ ಕಾಲದ ಸಾಮಾಜಿಕರೀತಿಯು ಜನಜೀವನದ ಜ್ಞಾನವಾಗುತ್ತದೆ. ಭಾವೀ ಜೀವನದ ನಿರೂಪಣೆಗೆ ಸಹಕಾರಿಯಾಗುವುದು.

ಈ ಕಿರುಹೊತ್ತಗೆಯನ್ನು ಬರೆಯಲು ಆಧರಿಸಿದ ಗ್ರಂಥಗಳ ಕರ್ತೃಗಳ ಉಪಕಾರವನ್ನು ನೆನೆಯುತ್ತೇವೆ. ಇಲ್ಲಿನ ಕೆಲವು ಚಿತ್ರಗಳು ಶ್ರೀ. ಕೆ.ಎಸ್. ಮಧ್ಯಸ್ಥರಿಂದ ದೊರೆತುವು, ಅವರಿಗೆ ನನ್ನ ಕೃತಜ್ಞತೆ ಸಲ್ಲಬೇಕಾಗಿದೆ. ಇದನ್ನು ಪ್ರಕಟಿಸಿದ ಬಗ್ಗೆ ಹಾಗೂ ಸದಭಿಪ್ರಾಯದಿಂದ ಓದುವ ಕನ್ನಡಿಗರಿಗೆ ಹಾರ್ದಿಕ ಧನ್ಯವಾದಗಳು ಸಲ್ಲಬೇಕಾಗಿವೆ ~~೨.೧-೨-೫೮~~

~~[illegible]~~

(ಲೇಖಕ)

(೨.೧-೨-೫೮)



ಶ್ರೀ ಕೃಷ್ಣದೇವರಾಯ.



ಚಾಳುಕ್ಯ ವಿಕ್ರಮಾಂಕ.



ಶ್ರೀ ಮಧ್ವಾಚಾರ್ಯ.

ಶ್ರೀ ಮಧ್ವಾಚಾರ್ಯರು.

ಭಾರತದಲ್ಲಿ ಜನಿಸಿದ ಹಲವಾರು ತತ್ತ್ವಜ್ಞಾನಿಗಳು ಜಗತ್ತಿನಲ್ಲಿ ಪ್ರಸಿದ್ಧರಾಗಿದ್ದಾರೆ. ಅವರಲ್ಲಿ ಶಂಕರಾಚಾರ್ಯ, ರಾಮಾನುಜಾಚಾರ್ಯ, ಮತ್ತು ಮಧ್ವಾಚಾರ್ಯರು 'ಆಚಾರ್ಯತ್ರಯರು' ಎಂದು ಹೆಸರುಗೊಂಡಿದ್ದಾರೆ.

ಶ್ರೀ ಶಂಕರಾಚಾರ್ಯರು ಕೇರಳದಲ್ಲಿ ಜನಿಸಿದವರು (8 ನೆಯ ಶತಕ), ಶ್ರೀ ರಾಮಾನುಜಾಚಾರ್ಯರು ತಮಿಳುನಾಡಿನಲ್ಲಿ ಜನಿಸಿದವರು (11 ನೆಯ ಶತಕ), ಶ್ರೀ ಮಧ್ವಾಚಾರ್ಯರು ಕನ್ನಡದಲ್ಲಿ ಅವತರಿಸಿದವರು (13 ನೆಯ ಶತಕ) ಎನ್ನುತ್ತಾರೆ.

ಪಡುಕಡಲ ತಡಿಯ ಉಡುಪಿಯು ಮಧ್ವರ ಹುಟ್ಟೂರು. 'ಒಡಿಪು' ಎಂದು ತುಳು ಭಾಷೆಯಲ್ಲಿಯೂ, 'ರಜತಪೀಠಪುರ'ವೆಂದು ಸಂಸ್ಕೃತದಲ್ಲೂ ಹೇಳುವ ಉಡುಪಿ ಗ್ರಾಮದಲ್ಲಿ ಜೈನರ ಗುಡಿಗಳೂ, ಶೈವದೇವಾಲಯಗಳೂ ಇದ್ದವು. ಆ ಸುತ್ತಿನಲ್ಲಿ ಬೌದ್ಧರು ಮತ್ತು ವೈಷ್ಣವರು ಆವಾಸವಿದ್ದರು. ಈ 'ಚತುಸ್ಸಮಯ'ಗಳು ಮಾತ್ರವಲ್ಲ, ಅದಾಗಲೇ ಶ್ರೀ ಬಸವೇಶ್ವರರ ಮತವು ಪ್ರಚಾರಗೊಳ್ಳುತ್ತಿತ್ತು. ಜನತೆಯು ಇವೆಲ್ಲ ವಿಚಾರಗಳಿಂದಾಗಿ ತತ್ತ್ವಜ್ಞಾನಮಾರ್ಗದಲ್ಲಿ ತಬ್ಬಿಬ್ಬಾದುದು ವಿಚಿತ್ರವಲ್ಲ.

ಒಮ್ಮೆ ಉಡುಪಿನ ಅನಂತೇಶ್ವರ ದೇವರ ಗುಡಿಯ ರಥೋತ್ಸವ ನಡೆಯುತ್ತಿತ್ತು. ಅಲ್ಲೊಬ್ಬ ಹೆದ್ದನು ಧ್ವಜಸ್ತಂಭಕ್ಕೆ ಏರಿ ಕೂಗಿಯುತ್ತ ನುಡಿದನು, 'ಜನರಲ್ಲಿ ಜ್ಞಾನಪ್ರಕಾಶವನ್ನು ಬೀರುವ ಮಹಾತ್ಮನು ಸದ್ಯದಲ್ಲೇ ಅವತರಿಸುವನು' ಎಂದು. ಈ ಮಾತಿನಿಂದ ಜನರಿಗೆ ಕೊಂಚ ಸಮಾಧಾನವಾಯಿತು.

ಅಲ್ಲಿನ ಅರ್ಚಕರಾದ ನಡ್ಡಂತಿಲ್ಲಾಯ (ನಡುಮನೆ-ಮಧ್ಯಗೇಹ) ಭಟ್ಟರು ಇದರಿಂದ ಬಹು ಸಂತುಷ್ಟರಾದರು. ಇವರು ಬಡವರೂ ಸಾತ್ವಿಕರೂ ಆಗಿದ್ದರು. ಇವರಿಗೆ ಇಬ್ಬರು ಗಂಡು ಮಕ್ಕಳೂ, ಒಬ್ಬಳು ಹೆಣ್ಣು ಮಗುವೂ ಹುಟ್ಟಿದ್ದರು. ಆ ಗಂಡು ಕೂಸುಗಳು ಚಿಕ್ಕಂದಿನಲ್ಲೇ ತೀರಿದ್ದುವು. ಹಾಗಾಗಿ ಪುತ್ರರಿಲ್ಲವೆಂಬ ಚಿಂತೆಯಿಂದ ಕೂಡಿದ ಭಟ್ಟರು ದೇವರ ಭಕ್ತಿಯಲ್ಲಿ ಲೀನರಾಗಿದ್ದರು. ಹಲವಾರು ಉಪವಾಸ, ವ್ರತ, ಪೂಜಾದಿಗಳನ್ನು ಮಾಡುತ್ತಿದ್ದರು. ಈ

ಮೇಲಿನ ಮಾತುಗಳಿಂದ "ದೇವರು ತನಗೆ ಅನುಗ್ರಹಿಸುವನೇ?" ಎಂದು ಭಾವಿಸುತ್ತಿದ್ದರು.

ಹುಟ್ಟು: ಆ ಮೇಲೆ ಕೆಲವು ದಿನಗಳಲ್ಲಿ ಇವರ ಹೆಂಡತಿ ವೇದವತಿ 'ಬಸುರಿ'ಯಾದಳು. ಅವಳ ಮುಖಕಾಂತಿಯು ಎಲ್ಲರಿಗೂ ಆನಂದದಾಯಕವಾಗಿತ್ತು. ವಿಜಯದಶಮಿಯ ಸುಮುಹೂರ್ತದಲ್ಲಿ ಗಂಡು ಕೂಸು ಹುಟ್ಟಿತು. ಮಗು ಹುಟ್ಟಿದೊಡನೆ ಕೊಂಚ ಹೊತ್ತು ನಿಶ್ಚೇಷ್ಟವಾಗಿತ್ತು, ಜನರ ಆರೈಕೆ ಮತ್ತು ದೈವಾನುಗ್ರಹಗಳಿಂದ ತಿರುಗಿ 'ಸ-ಪ್ರಾಣ'ವಾಯಿತು. ಈ ಹೊತ್ತಿನ ಆಕಾಶದಲ್ಲಿ ದೇವದುಂದುಭಿ ಮೊಳಗಿತು.

ಆ 'ನಡುಮನೆ'ಯ ಬ್ರಾಹ್ಮಣನು ಆಗ ದೇವರ ಸೇವೆಯನ್ನು ಮಾಡುತ್ತಿದ್ದನು. ದೇವರ ಮೂರ್ತಿಯ ಬಲಭಾಗದಿಂದ ಹೂವೊಂದು ತಾನಾಗಿ ಬಿದ್ದು, ದೈವಾನುಗ್ರಹ ಸೂಚಕವಾಯಿತು. ಭಟ್ಟರು ದೇವಾಲಯದಿಂದ ಮನೆಗೆ ತೆರಳುತ್ತಾ, ಮನೆಯಲ್ಲಾದ ಸಂಗತಿಗಳ ಸುದ್ದಿಯನ್ನು ಕೇಳಿದರು; ದೇವರ ಅನುಗ್ರಹವನ್ನು ಕೊಂಡಾಡಿದರು. ಕುಲಕ್ರಮದಂತೆ ಮಗುವಿಗೆ ನಾಮಕರಣವಾಯಿತು, 'ವಾಸುದೇವ'ನೆಂದು ಹೆಸರಾಯಿತು. ವಾಸುದೇವನು ಮುದ್ದಾಗಿ ಬೆಳೆದನು. 'ಇವನು ಹಿಂದಿನ ಯುಗದ ಭೀಮನೋ?' ಎಂದು ಜನರು ಉದ್ಗಾರವೆತ್ತಿದರು.

ಬಾಲ್ಯ: ವಾಸುದೇವನ ಬಾಲಲೀಲೆಗಳು ಹಲವಾರು ನಡೆದವು. ತಾಯಿಯಿಲ್ಲದ ಹೊತ್ತಿನಲ್ಲಿ ಅಕ್ಕನು ಕೊಟ್ಟ ಹುರುಳಿಯನ್ನು ತಿಂದು ಜೀರ್ಣಿಸಿದುದು, ತಂದೆಯು ಸಾಲವಾಗಿ ಕೊಂಡ ಹಣದ ಬದಲು ಹುಣಸೆ ಬಿತ್ತುಗಳನ್ನು ಧನಿಕನಿಗೆ ಕೊಟ್ಟು 'ಸಂತೈಸಿ'ದುದು, ಹಾವಾಗಿ ಬಂದು ಕಚ್ಚಿದ್ದ ದೈತ್ಯನನ್ನು ತುಳಿದುದು, ಮನೆಯಿಂದ ಒಬ್ಬನೇ ಹೊರಟು ಉಡುಪಿಗೆ ಹೋದುದು, ಏನೂ ಕಲಿಯದ ಬಾಲಕನಿದ್ದರೂ ಪುರಾಣಪಾಠಕರ ತಪ್ಪು-ಒಪ್ಪುಗಳನ್ನು ವಿವರಿಸಿದುದು, ಚೆಂಡಾಡುವ ಕಾಲದಲ್ಲಿ 'ಕಂದುಕಸ್ತುತಿ'ಯನ್ನು ರಚಿಸಿದುದು, ಗುರುಪುತ್ರನ ತಲೆನೋವನ್ನು ಹೋಗಲಾಡಿಸಿದುದು ಇತ್ಯಾದಿಗಳು 'ಇವನೊಬ್ಬ ಅವತಾರ ಪುರುಷ'ನೆಂದು ಜನರು ಆಡಿಕೊಳ್ಳುವಂತಿದ್ದುವು.

ಸನ್ಯಾಸ: ಜನರ ಧಾರ್ಮಿಕ ಜ್ಞಾನ ಮತ್ತು ಸಾಮಾಜಿಕ ವ್ಯವಹಾರಗಳನ್ನು ಸಮೀಚೀನಗೊಳಿಸಲು 'ದಿವ್ಯಾತ್ಮ'ರಾದ ಮಹಾಪುರುಷರು ಅವತರಿಸುವರೆಂದು ನಂಬುಗೆಯಿದೆ. ವಾಸುದೇವನೂ 'ದೇವಾಂಶ ಸಂಭೂತ'ನೆಂದು ಅಂತಹ ನಂಬುಗೆಯುಳ್ಳ ಜನರು ಹೇಳುತ್ತಿದ್ದರು. ಸಜ್ಜನರ ಉದ್ಧಾರಕ್ಕಾಗಿ ಸನ್ಯಾಸಿಯಾಗಿದ್ದೆಂದು;

ದೇಶಸಂಚಾರ ತತ್ತ್ವಪ್ರಚಾರಗಳನ್ನು ಕೈಕೊಳ್ಳಬೇಕೆಂದು ವಾಸುದೇವನು ಬಗೆದನು. ಅದಕ್ಕಾಗಿ ಅಚ್ಯುತಪ್ರೇಕ್ಷರೆಂಬ ಯತಿಗಳಲ್ಲಿ ಸೇರಿಕೊಂಡನು.

ಇತ್ತ ತಂದೆಯು ಮಗನನ್ನು ಕಾಣದೆ ಹಂಬಲದಿಂದ ಹುಡುಕುತ್ತಿದ್ದರು. ನೇತ್ರಾವತೀ ಹೊಳೆಯ ಆಚಿನ ದಡದ 'ಕುತ್ಯಾಡಿ' ಮಠದಲ್ಲಿ ಸ್ವಾಮಿಗಳೊಂದಿಗೆ ಮಗನಿರುವುದನ್ನು ಕಂಡುಹಿಡಿದರು. ಮಗನ ಹತ್ತಿರ ಸಾಗಿದರು. 'ಮಗನು ಕೌಪೀನ ತೊಟ್ಟರೆ, ಸನ್ಯಾಸವನ್ನು ಕೈಕೊಂಡರೆ, ತಾನು ಪ್ರಾಣವನ್ನು ತೊರೆಯುವೆನೆಂದು' ಭಟ್ಟರು ಪಂತವನ್ನು ತೊಟ್ಟರು. ವಾಸುದೇವನು ಉಟ್ಟಬಟ್ಟೆಯನ್ನೇ ಹರಿದು ಕೌಪೀನ ಧರಿಸಿ, ಮತ್ತೆ ತೋರಿಸಿದನು. ತಂದೆಯು ದುಃಖದಿಂದ ಮಗನ ಕಾಲು ಹಿಡಿದು ಬೇಡಿದರು. ಮಗನು 'ಇದೇ ನಿಮ್ಮ ಅಪ್ಪಣೆಯಾಯ್ತು!' ಎಂದು ಪರಿಹಾಸ ಮಾಡಿದನು. 'ನಾನಾದರೂ ಸಹಿಸಿಕೊಂಡೇನು. ತಾಯಿಯನ್ನು ಸಂತೈಸಬೇಕಲ್ಲ!' ಎಂದು ಭಟ್ಟರು ಯುಕ್ತಿಯನ್ನು ಹೂಡಿದರು. 'ತಾಯಿಯನ್ನು ನಾನೇ ಒಪ್ಪಿಸುವೆನು. ನೀವಾದರೂ ಈಗ ಒಪ್ಪಿಗೆ ಕೊಡಿರಿ' ಎಂದು ವಾಸುದೇವನು ವಾದಿಸಿದನು. ತಂದೆಯು ಮಗನ ವಾದಕ್ಕೆ 'ನಿರುತ್ತರ'ರಾದರು. ಭಟ್ಟರು ಮರಳಿ ಮನೆಗೆ ಬಂದು, ನಡೆದ ಸಂಗತಿಗಳನ್ನು ಹೆಂಡತಿಗೆ ಹೇಳಿದರು; ಮಗನಿಗೆ ಒಪ್ಪಿಗೆ ಕೊಡದಂತೆ ಅವಳನ್ನು ಬೋಧಿಸಿದರು

ಒಂದೆರಡು ವರುಷಗಳು ಕಳೆದುವು. ವೇದವತಿಯು ಇನ್ನೊಬ್ಬ ಮಗನನ್ನು ಹೆತ್ತಳು. ಆ ಮೇಲೊಮ್ಮೆ ವಾಸುದೇವನು ಮನೆಗೆ ಬಂದನು. 'ಯಾವಾಗಲಾದರೂ ನನ್ನನ್ನು ಕಾಣಬೇಕೆಂಬ ಆಸೆಯಿದ್ದರೆ, ನನ್ನ ಸನ್ಯಾಸಕ್ಕೆ ಒಪ್ಪಿಕೊಳ್ಳು. ಇಲ್ಲವಾದರೆ, ಎಂದೂ ಕಾಣದಂತೆ ನಾನು ಈ ನಾಡನ್ನೇ ಬಿಡುವೆನು' ಎಂದು ತಾಯಿಯೊಡನೆ ಹೇಳಿದನು. ತಾಯಿ ತಬ್ಬಿಬ್ಬಾದಳು. 'ಸನ್ಯಾಸಿಯಾಗಿದ್ದರೂ, ಎಂದಾದರೊಮ್ಮೆ ಮಗನನ್ನು ಕಣ್ತುಂಬಾ ಕಾಣಬಹುದಲ್ಲ! ಮಗನು ಊರನ್ನು ಬಿಟ್ಟು ಹೋದರೆ, ಅದೂ ಇಲ್ಲ!' ಎಂದು ತಿಳಿದ ತಾಯಿಯು ಮಗನ ಸನ್ಯಾಸ ಪಟ್ಟಕ್ಕೆ ಒಪ್ಪಿದಳು!

ವಾಸುದೇವನ ಸನ್ಯಾಸ ನಿರ್ಣಯವಾಯ್ತು. ಅಚ್ಯುತಪ್ರೇಕ್ಷರು ಅದಕ್ಕೆ ಬೇಕಾದ ಏರ್ಪಾಡು ಮಾಡಿದರು, ಕ್ರಮದಂತೆ ಮಂತ್ರೋಪದೇಶವನ್ನು ಮಾಡಿದರು, 'ಪೂರ್ಣಪ್ರಜ್ಞ'ರೆಂದು ಹೆಸರಿಂದ ಕರೆದರು. ಬಾಲಕನು ಮಠದ ಚಿಕ್ಕಸ್ವಾಮಿಯಾದನು.

ಪೂರ್ಣಪ್ರಜ್ಞರು ಸನ್ಯಾಸಿಗಳಿಗೆ ತಕ್ಕುದಾದ ವ್ರತೋಪವಾಸಗಳನ್ನು, ತಪೋನುಷ್ಠಾನಗಳನ್ನು ತಪ್ಪದೆ ನೆರವೇರಿಸುತ್ತಿದ್ದಲ್ಲದೆ ಗುರುಗಳಿಂದ ವಿದ್ಯಾಭ್ಯಾಸವನ್ನು ಪಡೆಯುತ್ತಿದ್ದರು. ವಿದ್ಯಾರ್ಥಿವೃಂದದಲ್ಲಿ ಮುಂದಾಳುವಾಗಿದ್ದರು. ಕೆಲವು ದಿನಗಳೊಳಗೆ ವಾದಸರಣಿಯಲ್ಲಿ 'ಅದ್ವಿತೀಯ'ರೆಂದು ಖ್ಯಾತಿಯನ್ನು ಸಂಪಾದಿಸಿದರು. ಗುರುಗಳ ಸಮ್ಮುಖದಲ್ಲಿ ಕುಳಿತು, ಪರವಾದಿಗಳ ವಾದದಲ್ಲಿ ದೋಷಗಳಿವೆಯೆಂದು, ಅವುಗಳಿಗೆ ತಿದ್ದುಪಾಡುಗಳನ್ನು ಸೂಚಿಸುತ್ತಿದ್ದರು. ಆ ಮೊದಲಿನ ಯಾವತ್ತು ಮತದವರು ರಚಿಸಿದ 21 ಭಾಷ್ಯಗಳಲ್ಲಿ ಪರಸ್ಪರ ಸಾಮರಸ್ಯವಿಲ್ಲೆಂದು, ಅವುಗಳಿಗಿಂತ ಶ್ರೇಷ್ಠವಾದ ಬ್ರಹ್ಮಸೂತ್ರ ಭಾಷ್ಯವನ್ನು ರಚಿಸಿದರು. ಈ ಗ್ರಂಥದಿಂದ ಇವರು 'ಜ್ಞಾನನಿಧಿ'ಗಳೆಂಬುದು ಸ್ಪಷ್ಟವಾಯಿತು!

ಸಂಚಾರ: ಜ್ಞಾನಾರ್ಜನೆಯಿಂದ ಮುಂದೆ ಸಾಗಿ ಗ್ರಂಥರಚನೆಯನ್ನು ಕೈಗೊಂಡ ಮೇಲೆ ದೇಶಸಂಚಾರಕ್ಕೆ ಹೊರಡುವುದು ಕ್ರಮಪ್ರಾಪ್ತವಾಗಿದೆ. ಕನ್ಯಾಕುಮಾರಿಯಿಂದ ಹಿಮಾಲಯದವರೆಗೆ ಹರಡಿದ ಭಾರತದಲ್ಲಿ ಆಗ ಹಲವಾರು ಮತದ ಪಂಡಿತರು ಇದ್ದರು. ಅವರೊಡನೆ ತನ್ನ ವಿಚಾರವನ್ನು ಚರ್ಚಿಸಿ, ವಾದಿಸಿ, ಅವರನ್ನು ಗೆಲ್ಲುವುದು ಕ್ರಮವಾಗಿತ್ತು. ಇಂತಹ ಸಂಚಾರದಿಂದ ಜನಜೀವನ ಕ್ರಮವೂ ತಿಳಿಯುವುದು. ಪೂರ್ಣಪ್ರಜ್ಞರು ದೇಶಸಂಚಾರದ ಮೂಲಕ ಮತಪ್ರಚಾರಕ್ಕೆ ಬಯಸಿದರು, ಗುರುಗಳಿಂದ ಅಪ್ಪಣೆಯನ್ನು ಪಡೆದು ಹೊರಟರು. ಆಯಾ ನಾಡಿನಲ್ಲಿ ಮುಖ್ಯವಾದ ತೀರ್ಥ ಕ್ಷೇತ್ರಗಳನ್ನು ಸಂದರ್ಶಿಸಿದರು. ಅಲ್ಲಿರುವ ವಿದ್ವಾಂಸರೊಡನೆ ಗೋಷ್ಠಿಯಾಗಿ, ತಮ್ಮ ಹೊಸನೋಟವನ್ನು ಹರಿಯಿಸಿದರು. ಆಗ ತಮ್ಮ ಮತದ ಧಾಟಿಯಲ್ಲಿ ಅನೇಕ ಗ್ರಂಥಗಳನ್ನು ಬರೆದರು. ಹತ್ತು ಉಪನಿಷತ್ತುಗಳು ಮತ್ತು ಭಗವದ್ಗೀತೆಯ ವ್ಯಾಖ್ಯಾನಗಳು ಮುಂತಾಗಿ ಮೂವತ್ತೇಳು ಗ್ರಂಥಗಳನ್ನು ರಚಿಸಿದರು. ಈ 'ಸರ್ವ...' ಗ್ರಂಥರಾಶಿಗೆ ಅನೇಕರು ಟೀಕೆ ಟಿಪ್ಪಣಿಗಳನ್ನು ಬರೆದಿ...

'ಪೂರ್ಣಪ್ರಜ್ಞ' [illegible]ರಿಗೆ ಆನಂದತೀರ್ಥ, ಮಧ್ವರೆಂಬ ಹೆಸರುಗಳು [illegible]ವೆ.

ಇತರ ವಿಶೇಷಗಳು: ಮಧ್ವಾಚಾರ್ಯರು ಜಟ್ಟಿಗಳಿಂದಲೂ ಬ[illegible]

ಲಾಗದಂತೆ ಕೈ ಹಿಡಿದುದು, ಚಿಕ್ಕ ಬಾಲಕನ ಹೆಗಲೇರಿ ಮಂಜೇಶ್ವರದ ನೃಸಿಂಹಾಲಯಕ್ಕೆ ಸುತ್ತುವರಿದುದು, 'ಅಷ್ಟಸಿದ್ಧಿ'ಗಳ ಸಂಪತ್ತನ್ನು ಸೂಚಿಸುವುದು. ಸಂಗೀತ ಹಾಗೂ ವೈದಿಕ ಮಂತ್ರಗಳಿಂದ ಮಳೆಯನ್ನು ಸುರಿಸಿದ್ದು ಮತ್ತು ಬೀಜದಿಂದ ಕೂಡಲೇ ಮೊಳಕೆಯೊಡೆಸಿದುದು, ತುರುಕ ರಾಜನೊಡನೆ ಭಾಷೆಯಲ್ಲಿ ಮಾತನಾಡಿದುದು ಇವರ 'ಸರ್ವಜ್ಞತೆ'ಯ ಕುರುಹುಗಳು.

ಉಡುಪಿಯಲ್ಲಿ ಶ್ರೀಕೃಷ್ಣನ ಪ್ರತಿಷ್ಠೆ ಮಾಡಿಸಿದುದು ಪ್ರಖ್ಯಾತವಾಗಿದೆ. ಕಳಿಂಗದೇಶದ ಅರಸನ ಬೊಕ್ಕಸದಲ್ಲಿದ್ದ ಮೂಲ ಸೀತಾರಾಮದೇವರ ಪ್ರತಿಮೆಗಳನ್ನು ನರಹರಿಯತಿಗಳ ಮೂಲಕ ತರಿಸಿದುದು ಇನ್ನೊಂದು ವೈಶಿಷ್ಟ್ಯವಾಗಿದೆ.

ಶ್ರೀಕೃಷ್ಣನ ಪ್ರತಿಮೆ ಸಿಕ್ಕಿದ ಬಗೆಗೆ 'ದಂತಕತೆ' ಬಹಳ ಚಮತ್ಕಾರವಾಗಿದೆ: "ದ್ವಾರಕೆಯಲ್ಲಿದ್ದ ಶ್ರೀಕೃಷ್ಣನು ರುಕ್ಮಿಣಿಗಾಗಿ ಸಾಲಿಗ್ರಾಮಶಿಲೆಯಿಂದ ಕಡೆಗೋಲು ಹಗ್ಗಗಳನ್ನು ಹಿಡಿದ ತನ್ನ ಪ್ರತಿಮೆಯನ್ನು ಮಾಡಿಸಿದನು. ಅದು ಗೋಪೀಚಂದನದಿಂದ ಮುಚ್ಚಿತ್ತು.

ಒಮ್ಮೆ ಮಧ್ವಾಚಾರ್ಯರು ಉಡುಪಿಯಲ್ಲಿ ಕಡಲ ದಂಡೆಯಲ್ಲಿ ಅಡ್ಡಾಡುತಿದ್ದರು. ಒಂದು ಹಡಗವು ಬಿರುಗಾಳಿಯಿಂದ ಕಡಲಲ್ಲಿ ತಡೆಹಿತ್ತು. ಇವರು ಬಟ್ಟೆಯನ್ನು ತೋರಿಸಿ ಹಡಗು ದಡಕ್ಕೆ ಬರುವಂತೆ ಸಂಕೇತಿಸಿದರು. ಅದಕ್ಕಾಗಿ ನಾವಿಕನ ಬೇಡಿಕೆಯಂತೆ, ಹಡಗದಲ್ಲಿದ್ದ ದ್ವಾರಕಾ ಮೃತ್ತಿಕೆಯ ಹೆಂಟೆಯನ್ನು ಪಡೆದರು. ಆ ಬಾಲಕೃಷ್ಣನ ವಿಗ್ರಹವನ್ನು ಉಡುಪಿಯಲ್ಲಿ ನೆಲೆಗೊಳಿಸಿದರು".

'ಇಲ್ಲಿ ಶ್ರೀಮಧ್ವರು ಮೊದಲನೆಯ ಸರ್ತಿ ಬದರಿಯಿಂದ ಬರುವಾಗ ದ್ವಾರಕೆಯ ಕೃಷ್ಣನ ಪ್ರತಿಮೆಯನ್ನು ತಂದರೆಂದು' ಐತಿಹಾಸಿಕ ಅಂಶವಿದೆಯೆನ್ನುವರು. ಕೃಷ್ಣನ ಪೂಜೆಯನ್ನು ಎರಡೆರಡು ವರುಷಗಳ ಸರತಿಯಿಂದ ನಡೆಸಲು [illegible] ಮೊದಲಾದ ಅಷ್ಟಯತಿಗಳನ್ನು ನಿಯಮಿಸಿದರು. ಇವರಿಗೆ 'ಅಷ್ಟಕನ್ಯೆ'ಯರೆಂದು ಹೊಗಳಿಕೆಯಿದೆ. ಗೋದಾವರೀ ಪ್ರದೇಶದ ಶೋಭನ ಭಟ್ಟರೇ ಮೊದಲಾದ ನಾಲ್ವರು ಪದ್ಮನಾಭತೀರ್ಥರೆಂದು ಮುಂತಾಗಿ ಹೆಸರಿಂದ ಸನ್ಯಾಸವನ್ನು ಕೈಗೊಂಡರು. ಈ ಪೀಳಿಗೆಯಲ್ಲಿ ಉತ್ತರಾದಿಮಠ, ವ್ಯಾಸರಾಯಮಠ, ರಾಘವೇಂದ್ರಮಠಗಳೆಂಬ 'ಮಠತ್ರಯ'ಗಳಿವೆ.

ಶ್ರೀಮಧ್ವಮತಕ್ಕೆ 'ದ್ವೈತಮತ'ವೆಂದೂ ಹೆಸರುಂಟು.

ಈ ಲೌಕಿಕ ಜೀವನದಲ್ಲಿ ಸಾಧುವರ್ತನೆಯಿಂದ ನಡೆಯಬೇಕು, ಅಲೌಕಿಕ ವಿಚಾರದಲ್ಲಿ ಶ್ರೀಹರಿಯು ಸರ್ವೋತ್ತಮನು, ಆತನ ಅಧೀನದಲ್ಲಿ ಈ ಜಗತ್ತು ನಡೆಯುವುದು, ಪ್ರತಿಯೊಂದು ಜೀವಿಯು ತನ್ನ ಗುಣ ಕರ್ಮಾದಿಗಳಿಗೆ ತಕ್ಕ ಗತಿಯನ್ನು ಹೊಂದುವನು, ಉತ್ತಮ ಗತಿಯನ್ನು ಬಯಸುವವನು ಪರಮಾತ್ಮನ ಭಕ್ತಿಯನ್ನು ಕೈಕೊಳ್ಳಬೇಕು, ಇವೇ ಮೊದಲಾದವು ಈ ಮತದ ತಿರುಳುಗಳು. ಶ್ರೀಮಧ್ವಮತದ ಸಾರವನ್ನು ಒಂದೆಡೆ ಹೀಗೆ ಹೇಳಿದೆ: ೧) ಶ್ರೀಹರಿಯು ಪರತರನು. ೨) ಜಗತ್ತು ಸತ್ಯವಾದುದು. ೩) ಈಶ್ವರ ಜೀವ ಜಗತ್ತುಗಳೊಳಗೆ ಭೇದವಿದೆ. ೪) ಜೀವಿಗಳು ಹರಿಯ ಕಿಂಕರರು. ೫) ಜೀವಿಗಳಲ್ಲಿ ತಾರತಮ್ಯವಿದೆ. ೬) ನಿಜಸುಖದ ಅನುಭೂತಿಯೇ ಮುಕ್ತಿ. ೭) ಶುದ್ಧ ಭಕ್ತಿಯೇ ಮುಕ್ತಿಗೆ ಸಾಧನ ೮) ವೇದಾದಿ ಮೂರು ಮುಖ್ಯ ಪ್ರಮಾಣಗಳು. ೯) ಎಲ್ಲಾ ವೇದಗಳಿಂದಲೂ ಹರಿಯೇ ತಿಳಿಯತಕ್ಕವನು.

ಶ್ರೀಮಧ್ವಾಚಾರ್ಯರ ಜೀವನಚರಿತೆಯನ್ನು ಹಲವಾರು ಗ್ರಂಥಗಳಲ್ಲಿ ತಿಳಿಯಬಹುದು. ಶ್ರೀಪಾದರಾಜರು ಹಾಡಿದುದು ಹೀಗಿದೆ: "ಪಾವನರು ಕಲಿಯುಗದೊಳವತರಿಸಿ ಸುಜನರಿಗೆ। ವೇದದ ಸುಮತವ ಬೋಧಿಸಿದನರಿತು। ಜ್ಞಾನಿ ತಾ ಪವಮಾನ ಭೂತಳದೊಳವತರಿಸಿ। ಮಾನನಿಧಿ ಮಧ್ವಾಖ್ಯನೆಂದೆನಿಸಿದ॥"

ಶ್ರೀಮಧ್ವರು ಸುಮಾರು ಎಂಬತ್ತು ವರ್ಷ ಬಾಳಿದ್ದರು (೧೨೦೦-78). ತಾತ್ತ್ವಿಕ ವಿಚಾರದಲ್ಲಿ ಮಧ್ವಮತವೇ ಕೊನೆಯ ಹಂತವಾಗಿ ನಿಂತಿದೆ, ಭಕ್ತಿಯೋಗದ ಬಾಹುಳ್ಯವಿರುವ ಬಂಗಾಳದ ಚೈತನ್ಯಪಂಥವು ಮಾಧ್ವಮತದ ಹರಿಭಕ್ತಿಯ ಸಾಹಿತ್ಯದಿಂದ ಪ್ರಭಾವಿತವಾಗಿದೆಯೆನ್ನುವರು.

ಅಭ್ಯಾಸದ ಸೂಚನೆಗಳು:

1) ವಾಸುದೇವನ ಅವತಾರಕ್ಕೆ ಕಾರಣಗಳು ಯಾವುವು?
2) ಇವನ ಬಾಲಲೀಲೆಗಳು ಯಾವುವು?
3) ಇವರು 'ಸರ್ವಜ್ಞ'ರೆಂದು ಹೇಗೆ ತಿಳಿಯುವುದು?
4) ಮಧ್ವಾಚಾರ್ಯರಿಗೆ ಕೃಷ್ಣಪ್ರತಿಮೆ ಹೇಗೆ ಸಿಕ್ಕಿದುದು?
5) ಮಧ್ವಮತದ ತತ್ತ್ವಗಳನ್ನು ಸಂಗ್ರಹವಾಗಿ ಬರೆಯಿರಿ.
6) ಮಾಧ್ವಮತವನ್ನು ಯಾರು ಅನುಸರಿಸಿದರು?

--- x --- x ---

ಪುರಂದರ ವಿಠಲ.

ಮಾನವನು ದೈಹಿಕಸುಖ ಮತ್ತು ಆತ್ಮಿಕ-ಆನಂದವನ್ನು ಪಡೆಯಲು ಭಗವಂತನ ಭಕ್ತಿಯೇ ಮುಖ್ಯಸಾಧನವೆಂದು ತಿಳಿಯುವುದು. ಭಕ್ತಿಯ ಉಗಮವು ವೇದಗಳಲ್ಲಿ, ಉಪನಿಷತ್ತುಗಳಲ್ಲಿ ಕಾಣುವುದು. ಅದು ಮುಂದೆ ಭಾಗವತ ಮುಂತಾದ ಪುರಾಣಗಳಲ್ಲಿ ವಿಸ್ತೃತವಾಯಿತು.

ಭಕ್ತಿಗೀತೆ: ಶ್ರೀ ಶಂಕರಾಚಾರ್ಯರು 'ಷಣ್ಮತ-ಸ್ಥಾಪನಾಚಾರ್ಯ'ರಾದುದರಿಂದ ಅವರ ಗ್ರಂಥಗಳಲ್ಲಿ ವಿಷ್ಣು, ಶಿವ ಮೊದಲಾದ ದೇವರುಗಳ ಭಕ್ತಿಯು ಪ್ರತಿಪಾದಿತವಾಗಿದೆ. ಶ್ರೀಮಧ್ವಾಚಾರ್ಯರ ಗ್ರಂಥಗಳಲ್ಲಿ ಹರಿಭಕ್ತಿಯು ಮುಖ್ಯವಾಗಿ ವಿವೇಚಿಸಲಾಗಿದೆ. ಇವರ ಶಿಷ್ಯರಾದ ಶ್ರೀನರಹರಿಯತಿಗಳು ಕನ್ನಡದಲ್ಲಿಯೂ ಹರಿಕೀರ್ತನೆಗಳನ್ನು ಹಾಡಲಾರಂಭಿಸಿದರು. ಈ ಪ್ರಾದೇಶಿಕ ಭಾಷಾತ್ಮಕ ಕ್ರಮವು ಅವರ ಕಾಲದಲ್ಲಿ ಹೆಚ್ಚು ಬೆಳೆಯಲಿಲ್ಲ. ಶ್ರೀಪಾದರಾಯ, ಶ್ರೀವ್ಯಾಸರಾಯ, ಶ್ರೀವಾದಿರಾಜರೆಂಬ ಯತಿತ್ರಯರು; ಪುರಂದರ, ಕನಕ, ವಿಜಯೀಂದ್ರರೆಂಬ ಹರಿದಾಸತ್ರಯರು ಈ ಕ್ರಮವನ್ನು ಊರ್ಜಿತಕ್ಕೆ ತಂದರು. ಗ್ರಂಥಗಳನ್ನು ಸಂಸ್ಕೃತದಲ್ಲಿ ಬರೆಯುವುದಕ್ಕೆ 'ವ್ಯಾಸಕೂಟ'ವೆಂದೂ, ಪ್ರಾದೇಶಿಕ ಭಾಷೆಯಲ್ಲಿ ಬರೆಯುವುದಕ್ಕೆ 'ಹರಿದಾಸಕೂಟ'ವೆಂದೂ ಈ ಕಾಲದಲ್ಲಿ ರೂಢವಾಯಿತು. ಇವುಗಳ ಉದ್ದೇಶವೊಂದಾಗಿತ್ತು.

ತಮಿಳಿನ ಆಳ್ವಾರರಂತೆ, ಕನ್ನಡದ ಶಿವಶರಣರಂತೆ, ಹರಿದಾಸರು ಕೀರ್ತನಸಾಹಿತ್ಯದಲ್ಲಿ ವಿವಿಧಧಾಟಿಗಳನ್ನು ಪ್ರಯೋಗಿಸಿದರು. ಜನಸಾಮಾನ್ಯರಲ್ಲಿ ತತ್ತ್ವಪ್ರಚಾರವನ್ನು ಮಾಡುವ ಮುಖ್ಯೋದ್ದೇಶದಿಂದ ರಚಿತವಾದ ಹರಿಕೀರ್ತನೆಗಳಲ್ಲಿ ಸಾಹಿತ್ಯಗುಣಗಳು ಸೇರಿಕೊಂಡಿವೆ. 'ಕನ್ನಕ್ಕೆ ಚಿನ್ನದ ಕೂಟ'ವಾದಂತೆ ಕಂಗೊಳಿಸುತ್ತವೆ. ಇವುಗಳಿಂದ ನಮ್ಮ ಧಾರ್ಮಿಕಜ್ಞಾನವೂ ಸಾಮಾಜಿಕವ್ಯವಹಾರವೂ ಉನ್ನತಿಗೊಂಡು, ಉತ್ತಮಸಂಸ್ಕೃತಿಯ ಲಾಭವೂ ಆಗುವುದು. ಪುರಂದರವಿಠಲನ ಜೀವನಚರಿತೆಯನ್ನು ಕೀರ್ತನೆಗಳನ್ನು ಕೊಂಚ ವಿವರಿಸುತ್ತೇವೆ.

ಪುರಂದರದಾಸ: ಪಂಢರಪುರವು ಭಕ್ತಿಯ ಕೇಂದ್ರವೆಂದು ಹಿಂದಿನಿಂದಲೂ ಪ್ರಸಿದ್ಧವಾಗಿದೆ. ಅಲ್ಲಿಯ ವಿಠಲನು ಪುಂಡಲೀಕನಿಗೆ ಒಲಿದು ಇಟ್ಟಿಗೆಯಲ್ಲಿ ನಿಂತನೆಂದು ಇತಿಹಾಸವಿದೆ. ಅದು ಕಾರಣ,



ಶ್ರೀ ಪುರಂದರ ವಿಠಲ

ಅಲ್ಲಿಗೆ ಹಲವಾರು ಭಕ್ತರು ಬಂದು ಹೋಗುತ್ತಿದ್ದರು. ಈ ಸ್ಥಳವು 6-7ನೆಯ ಶತಕದಲ್ಲಿ ಕನ್ನಡವೆಂದು ಉಲ್ಲೇಖವಿದೆ. ಪಂಢರ-ಪುರದ ಹತ್ತಿರದಲ್ಲಿ 'ಪುರಂದರ ಗಡ'ವೆಂದು ಪ್ರಸಿದ್ಧವಾದ ನಗರವಿದೆ. ಈ ಹೆಸರು 'ಪುರಂದರ ವಿಠಲನ'ನಿಂದ ಬಳಕೆಯಾಗಿದ್ದಿರಬೇಕು. ಅಲ್ಲಿಯ ಚಿನ್ನದ ವ್ಯಾಪಾರಿ ವರದಪ್ಪ ನಾಯಕನ ಮಗ ಶ್ರೀನಿವಾಸ ನಾಯಕನು 'ಪುರಂದರ'ನಾದ ವ್ಯಕ್ತಿ. ಇವನು 'ನವಕೋಟಿ ದ್ರವ್ಯ'ದ ಒಡೆಯನಾಗಿದ್ದನು, ವ್ಯಾಪಾರದಿಂದ ಮತ್ತಷ್ಟು ಧನವನ್ನು ಗಳಿಸುತ್ತಿದ್ದನು. ಕಡು ಲೋಭಿಯಾದುದರಿಂದ ಚಿಕ್ಕಾಸಾದರೂ ದಾನಧರ್ಮಗಳಿಗೆ ವಿನಿಯೋಗಿಸುತ್ತಿದ್ದಿಲ್ಲ. ಇವನ ಈ ಜೀವನವು ಮಾರ್ಪಡಾದುದು ಬಹಳ ಚಮತ್ಕಾರವಾಗಿದೆ. ಈ ಬಗೆಗೆ ಒಂದು ಕತೆಯಿದೆ: ಒಮ್ಮೆ ಒಬ್ಬ ಬಡವನು ಇವನಲ್ಲಿಗೆ ಬಂದು ಕಿಂಚಿತ್ ಧನವನ್ನು ಬೇಡಿದನು. ಇವನು ಲೋಭದಿಂದಾಗಿ ಕೊಡದೆ ದಿನಗಳೆಯುತ್ತಿದ್ದನು. ಆ ಬಡವನು ಕೊನೆಗೆ ಇವನ ಹೆಂಡತಿಯೊಡನೆ ಬೇಡಿದನು. ಆಕೆ ತನ್ನದಾದ 'ಮೂಗುತಿ'ಯನ್ನು ಕೊಟ್ಟಳು. ಅದನ್ನು ಮಾರಲು ಆ ಬಡವನು ಶ್ರೀನಿವಾಸನಾಯಕನಲ್ಲಿಗೆ ಬಂದನು. 'ಇದು ತನ್ನ ಮನೆಯಾಕೆಯದು' ಎಂದು ಸಂಶಯದಿಂದ ಆಕೆಯನ್ನು ವಿಚಾರಿಸಿದನು. ಆಕೆ ಅತ್ತ ಸತ್ಯಸಂಗತಿ ಹೇಳಲು ಬೆದರಿದಳು, ಇತ್ತ ಗಂಡನ ಶಿಕ್ಷೆಗೆ ಹೆದರಿದಳು. ಆಕೆ ಪ್ರಾಣತ್ಯಾಗಕ್ಕಾಗಿ ವಜ್ರವನ್ನು ಕಡೆದ ವಿಷವನ್ನು ತಯಾರಿಸಿದಳೆಂದು, ಅಥವಾ ಆಕೆಯನ್ನು ಕಂಭಕ್ಕೆ ಕಟ್ಟಿ ಬಡಿದನೆಂದು; ಆಗ ಆ ಮೂಗುತಿಯು ಆಕೆಗೆ ತಾನಾಗಿ ದೊರಕಿತು. ನಾಯಕನು ಅಂಗಡಿಯಲ್ಲಿ ಭದ್ರವಾಗಿಟ್ಟ ಮೂಗುತಿ ಮಾಯವಾಗಿತ್ತು. ಹೆಂಡತಿಯಿಂದ ನಿಜಸಂಗತಿಯೆಲ್ಲ ಕೇಳಿ ತಿಳಿದನು. ದೇವರ ಮಹಿಮೆಯನ್ನೂ ಆಕೆಯ ಭಕ್ತಿಯನ್ನು ನಾಯಕನು ಮನವಾರೆ ಕೊಂಡಾಡಿದನು. ಆಮೇಲೆ ಲೋಭತನವನ್ನು ತ್ಯಜಿಸಿ, ಹಣವನ್ನೆಲ್ಲ 'ಬುಧ'ರಿಗೆ ದಾನವಾಗಿ ಇತ್ತನು. ದೇವರ ಭಕ್ತಿಯೇ ನಿತ್ಯಸುಖದ ಸಾಧನವೆಂದು ಬಗೆದು, ಹಂಪೆಯಲ್ಲಿದ್ದ ಶ್ರೀ ವ್ಯಾಸರಾಯರಿಂದ ಮಂತ್ರೋಪದೇಶವನ್ನು ಹೊಂದಿ, ಅವರ ಕೀರ್ತನೆಗಳ ಮಾದರಿಯಲ್ಲಿ ತಾನೂ ರಚಿಸತೊಡಗಿದನು. ಈ ಕೀರ್ತನೆಗಳಲ್ಲಿ 'ಪುರಂದರವಿಠಲ'ನೆಂಬ ಅಂಕಿತವಿದೆ. 'ದಾಸರೆಂದರೆ ಪುರಂದರದಾಸರಯ್ಯ' ಎಂದು

ವ್ಯಾಸರಾಯರೇ ಹೊಗಳಿದ್ದರು!

ಕಥಾಂತರಗಳು: ಶ್ರೀನಿವಾಸನಾಯಕನ ನಾಲ್ಕು ಮಕ್ಕಳು ಅನುಕ್ರಮವಾಗಿ "ವರದ ಪುರಂದರ, ಗುರು ಪುರಂದರ, ಮಧ್ವಪತಿ ಪುರಂದರ, ಅಭಿನವ ಪುರಂದರ" ಎಂದೂ, ಮಗಳು 'ತಂದೆ ಪುರಂದರ' ಎಂದೂ, ಹೆಂಡತಿ 'ಶ್ರೀ ಪುರಂದರ' ಎಂದು, ಭೃತ್ಯನು 'ಒಡೆಯ ಪುರಂದರ' ಎಂದೂ ಅಂಕಿತದಿಂದ ಕೀರ್ತನೆಗಳನ್ನು ರಚಿಸಿದರೆಂದು ಹೇಳುತ್ತಾರೆ. ಇತ್ತೀಚಿನ ದೊರೆತ ಶಾಸನವೊಂದರಲ್ಲಿ ಪುರಂದರ ದಾಸರ ಮೂವರು ಪುತ್ರರ ಹೆಸರಿದೆ. ಈ ಲಕ್ಷ್ಮಣ ದಾಸ, ಹೇಬಣ (ಹೆಬ್ಬಣ?) ದಾಸ, ಮಧ್ವಪದಾಸರು ವಸಿಷ್ಠಗೋತ್ರದವರೆಂದೂ ಯಜುಶ್ಶಾಖೆಯವರೆಂದೂ ಅದರಲ್ಲಿ ಹೇಳಿದೆಯಂತೆ!

ಪುರಂದರ ದಾಸರ ಜೀವನಕ್ಕೆ ಸಂಬಂಧಿಸಿ ಕೆಲವು ಕತೆಗಳಿವೆ: ಒಂದು, ಪುರಂದರರು 'ಯಂತ್ರೋದ್ಧಾರಕ ಮುಖ್ಯಪ್ರಾಣ'ನ ಪೂಜೆಗೆ ಮಗನನ್ನು ಕಳುಹಿದರು. ಆತನು (ಮಧ್ವಪತಿ) ಭಕ್ತಿಯಿಂದ ಕೊಟ್ಟ ನೈವೇದ್ಯವನ್ನು ಹನುಮನ ಬಿಂಬ ಉಂಡಿತು. ಹೀಗೆ ನಾಲ್ಕಾರು ದಿನಗಳಲ್ಲಿ ನೈವೇದ್ಯವು ಕಾಣೆಯಾಗುವುದನ್ನು ತಿಳಿದ ಪುರಂದರರು ಮಗನ ಹೇಳಿಕೆಯನ್ನು ಪರೀಕ್ಷಿಸಿದರು. ಅವರ ಸಮಕ್ಷದಲ್ಲೇ ಹನುಮನ ವಿಗ್ರಹವು ನೈವೇದ್ಯವನ್ನು ಭುಂಜಿಸಿತ್ತು. ತಂದೆಯು ಆ ಮಗನನ್ನು ಕೊಂಡಾಡಿ, ದೇವರ ಭಕ್ತಿಯಲ್ಲಿ ಮೆಚ್ಚಿದರು!

ಇನ್ನೊಮ್ಮೆ ಊಟದ ಹಂತಿಗೆ 'ಅಪ್ಪಣ್ಣ ಭಾಗವತನ ರೂಪವು ತಾನಾಗಿ ತುಪ್ಪದ ಬಿಂದಿಗೆ ತಂದ' ದೇವರೆಂದು ಕೇಳುತ್ತೇವೆ. 'ಏನು ಕೌತುಕವೋ ಕೃಷ್ಣ ತಾನೆ ಕನಸಿನೊಳು ಮಾನವನ ತೆರನಂತೆ ಮರುಳುಗೊಳಿಸಿದನೆನ್ನ'ವೆಂದೂ, ಆಗ '[illegible]'ವೆಂದೂ ಮಧುರ ಸ್ವರಗೇಯ ಇದೆ. 'ಕಂಡೆ ನಾ ಕನಸಿನಲಿ ಗೋವಿಂದನ – ತುಂಗ ಭದ್ರೆಯ ತಡಿಯಲ್ಲಿ ನಿಂದವನ' ನೆಂದು ಹೇಳಿದೆ.

ಸಂಚಾರ: ಪುರಂದರ ವಿಠಲನು ಹರಿದಾಸ ಕೂಟದ ಪ್ರಚಾರಕ್ಕಾಗಿ ಕನ್ನಡದ ಹಲವಾರು ತೀರ್ಥಕ್ಷೇತ್ರಗಳನ್ನು ಸಂಚರಿಸಿದ್ದನು, ಅಲ್ಲಿಯ ದೇವರನ್ನು ಪ್ರತ್ಯೇಕವಾಗಿ ಕೊಂಡಾಡಿದ್ದನು. ಅವುಗಳಲ್ಲಿ ಹಂಪೆಯ ರುದ್ರ, ಯಂತ್ರೋದ್ಧಾರಕ ಮುಖ್ಯಪ್ರಾಣ, ವೇಲಾಪುರದ ಚೆನ್ನಿಗ, ಗದುಗಿನ ವೀರನಾರಾಯಣ, ಪಂಢರಪುರದ ವಿಠಲ, ಶೃಂಗಪುರದ ಶಾರದೆ, ತೆರವೆಂಬ ನರಹರಿ, ಕೋಟಿಪುರದ ಹರಿ, ಉಭಯಕಾವೇರಿ ಮಧ್ಯದ ರಂಗನಾಥ, ತಿರುಪತಿಯ ವೆಂಕಟರಮಣ, ಉಡುಪಿಯ ಕಡಗೋಲು

ಕೃಷ್ಣ, ಭದ್ರಾಚಲದ ರಾಮ, ಘಟಿಕಾಚಲದ ಹನುಮಂತ, ಸೋದೆಯ ಹಯವದನ ಮೊದಲಾದವು ಸೇರುತ್ತವೆ.

ಈ ಶ್ರೀನಿವಾಸನಾಯಕನು ಇಸ್ವಿ 1480ರಲ್ಲಿ ಜನಿಸಿದನು, ಇಸ್ವಿ 1565 ಜನವರಿ ೧ರಲ್ಲಿ ಗದ್ವಾಲಿನ ಹತ್ತಿರ ವನವರ್ತಿಯೆಂಬಲ್ಲಿ ತೀರಿದನೆಂದು ತಿಳಿಯುವುದು. ಕನ್ನಡ ಕವಿ ಕುಮಾರವ್ಯಾಸನೂ ಪುರಂದರವಿಠಲನೂ ಸಮಕಾಲಿಕರೆನ್ನಲು ಪ್ರಬಲವಾದ ಆಧಾರಗಳಿಲ್ಲ. ಕುಮಾರವ್ಯಾಸನು ಹದಿಮೂರನೆಯ ಶತಕದವನು, ಪುರಂದರನು ಹದಿನೈದು-ಹದಿನಾರನೆಯ ಶತಕದವನು. ಈ ನಾಯಕನು 'ಹರಿದಾಸ' ನಾಗುವ ಮೊದಲು ಸ್ಮಾರ್ತಬ್ರಾಹ್ಮಣನಾಗಿದ್ದನೆಂದೂ, ವ್ಯಾಸರಾಯರಿಂದ ಮಂತ್ರೋಪದೇಶವಾದ ಮೇಲೆ ಮಾಧ್ವನಾದನೆಂದೂ ಹೇಳುವುದು ಸಮಂಜಸವಾಗಿದೆ.

<u>ಸಂಗೀತ:</u> ಕರ್ನಾಟಕದ ಪುಂಡರೀಕವಿಠಲನು ಸದ್ರಾಗಚಂದ್ರೋದಯ, ರಾಗಮಂಜರೀ, ನರ್ತನನಿರ್ಣಯ, ರಾಗಮಾಲಾ ಎಂಬ ನಾಲ್ಕು ಗ್ರಂಥಗಳನ್ನು ಬರೆದನು. ಇವನು ಪುರಂದರವಿಠಲನ ಸಮಕಾಲೀನನು. ಇದೇ ಕಾಲದ ರಾಮಾಮಾತ್ಯನು 'ಸ್ವರಮೇಳಕಲಾನಿಧಿ'ಯನ್ನು ಬರೆದನು. ಪುರಂದರವಿಠಲನು ಸಂಗೀತ ಲಕ್ಷಣಗಳುಳ್ಳ ಗೀತೆಗಳನ್ನು ರಚಿಸಿದವನು. ಆ ಮೇಲಿನ ಗ್ರಂಥಕಾರರು 'ಪುರಂದರವಿಠಲನು ಸಂಗೀತದ ಆಚಾರ್ಯ'ನೆಂಬಷ್ಟು ಹೊಗಳಿದ್ದಾರೆ. ತ್ಯಾಗರಾಜನಂತೂ ಪುರಂದರನ ಬಗೆಗೆ ಗೌರವವನ್ನು ವ್ಯಕ್ತಮಾಡಿದ್ದಾನೆ. ಇವೆಲ್ಲ ಕಾರಣಗಳಿಂದ ದಕ್ಷಿಣಾದಿ ಅಥವಾ ಕರ್ನಾಟಕ ಸಂಗೀತಕ್ಕೆ ಪುರಂದರವಿಠಲನು ಮೂಲಾಚಾರ್ಯನೆಂದು ಹೇಳುತ್ತಾರೆ.

<u>ಗೀತೆಗಳು:</u> ಪುರಂದರದಾಸನ ಕೀರ್ತನೆಗಳು ಹಲವು ಧಾಟಿಯಲ್ಲಿ ರಚಿತವಾಗಿವೆ. ಅವುಗಳಲ್ಲಿ ಎಂಟು ಹತ್ತು ಕವನಗಳನ್ನು ಇಲ್ಲಿ ಉದ್ಧರಿಸಿದ್ದೇವೆ.

"ಕೇಳನೋ ಹರಿ ತಾಳನೋ, ತಾಳಬೇಕು ತಕ್ಕ ಮೇಳಬೇಕು" ಎಂದು ಕೀರ್ತನೆಯು ಹೇಗಿರಬೇಕೆಂದು ಸೂಚಿಸಿದ್ದಾನೆ. "ಒಂದರೆ [illegible] ನಾ[illegible]ನಲದನು ಒಂದು ಕಳೆದು ಮತ್ತೊಂದು ಬಾರದು" ದೀಗಿಷ್ಟವಿದೆಯೆಂದೂ ಸಾರಿದ್ದಾನೆ. "ವ್ಯಾಪಾರ ನಮಗಾಯಿತು, ಗುರು ಗುಡಿಯನು ಸೇರಿದನೋ, ತಾನು ಬಾರಿಸುತಿದೆ ಕೇಳಿ, ಜಂಗಮರು ನಾವು ಜಗದೊಳು" ಇತ್ಯಾದಿಯಾಗಿ ಗೀತೆಗಳಲ್ಲಿ ತತ್ತ್ವವಿಚಾರವನ್ನು ತುಂಬಿಸಿ ನಿರೂಪಿಸಿದ್ದಾನೆ. "ಮನವ ಶೋಧಿಸಬೇಕು ನಿಚ್ಚ, ದುರ್ಗಾವೆಂಬ

ಸಾತಕವು ಬಹುಬಾಧೆ ಪಡಿಸುತ್ತಿದೆ" ಇತ್ಯಾದಿ ಉಪದೇಶಗಳಿವೆ. "ಡಂಗುರವ ಸಾರಿರಯ್ಯ ಡಿಂಗರಿಗರೆಲ್ಲರು - ಭೂಮಂಡಲಕ್ಕೆ ಪಾಂಡುರಂಗ ವಿಠಲ ಪರದೈವವೆಂದು" ಸಾಮಾನ್ಯವಾಗಿ ಘೋಷಿಸಿದ್ದಾನೆ. "ಹರಿಕಥಾ ಕೀರ್ತನ ಹರಿನಾಮಸ್ಮರಣ। ಹರಿಪಾದಸೇವನ ಹರಿ ಪೂಜಾ ವಂದನ। ಹರಿದಾಸ್ಯ ಸಖ್ಯತ್ವ ಹರಿಗಾತ್ಮಾರ್ಪಣ। ಹರಿಭಕ್ತಿಯೋ ಮುಕ್ತಿಪಥ ತತ್ವ। ಪುರಂದರ ವಿಠಲನೆ ಪರಮಾತ್ಮಸಿದ್ಧ। ವರ ಮಧ್ವಮತ ಶ್ರುತಿಸ್ಮೃತಿಯೊಳ್ ಪ್ರಸಿದ್ಧ॥"ವೆಂದು ನವವಿಧ ಭಕ್ತಿಪ್ರಶಂಸೆಯನ್ನು ವಿಶೇಷವಾಗಿ ಹೇಳಿದ್ದಾನೆ. "ಮನ = ಶರೀರವಿದೇನು ಸುಖ"ವೆಂದು ಪ್ರಶ್ನಿಸಿ, ದೇಹಸುಖವನ್ನೇ ಮುಖ್ಯವಾಗಿ ತಿಳಿಯುವವರನ್ನು ಎಚ್ಚರಿಸಿದ್ದಾನೆ. "ಅನುಭವದಡುಗೆಯ ಮಾಡಿ, ರಾಮ ನಾಮ ಪಾಯಸಕ್ಕೆ ಕೃಷ್ಣನಾಮ ಸಕ್ಕರೆ ವಿಠಲನಾಮ ತುಪ್ಪ ಬೆರಸಿ ಬಾಯಿ ಚಪ್ಪರಿಸಿರೋ" ಎಂದು ರೂಪಕದಿಂದ ವಿಷಯವನ್ನು ಚಿತ್ರಿಸಿದ್ದಾನೆ. "ಯಾಕೆನ್ನ ನೀ ರಕ್ಷಿಸ್ಯೆ ತಂದೆ ಹರಿಯೇ, ಕರುಣಾಕರ ಹಿಸೋಬುವರೆಗೆ ಭರವಸೆಯಿಲ್ಲೆನಗೆ" ಎಂದು ಮೊದಲಾಗಿ ದೇವನನ್ನು ವೈವಿಧ್ಯದಿಂದ ಬೇಡಿದ್ದಾನೆ. "ಯಾರು ಬಿಟ್ಟರು ಕೈಯ ನೀ ಬಿಡದಿರು ಕಂಡ್ಯ ನಾರಾಯಣ ಸ್ವಾಮಿ" ಯೆಂದು ತಾನು ಅನನ್ಯಾಶ್ರಯನೆಂದು ದೃಢವಾಗಿ ನಿವೇದಿಸಿದ್ದಾನೆ.

ಇನ್ನು ಕೃಷ್ಣನ ಬಾಲಲೀಲೆಗಳನ್ನು ಕುರಿತು ಹೇಳಿದವುಗಳು ಹಲವು; ನಾರಾಯಣನ ವಿವಿಧರೂಪಗಳ ಸಮಾನತೆಯನ್ನು ಸಾರಿದವು ಕೆಲವು; ಹರಿಭಕ್ತರ ಉದಾಹರಣೆಗಳಿಂದ ಮಹಿಮೆಯನ್ನು ನಿಶ್ಚಯಿಸಿದವು ಕೆಲವು; ಮಧ್ವ, ವ್ಯಾಸರಾಯ, ವಾದಿರಾಜ, ಕನಕದಾಸರನ್ನು ಕುರಿತು ಬರೆದವು ಕೆಲವು; ಹೀಗೆ ನಾನಾವಿಧದಲ್ಲಿ ನಾನಾರಾಗಗಳಲ್ಲಿ ಹೇಳಿದ್ದಾನೆ. ಇವನ ಪದ್ಯಗಳು ಉಪಮಾನ ಇತ್ಯಾದಿಗಳಿಂದ ಕೂಡಿವೆ; ಕನ್ನಡದ ನುಡಿಗಳ ಪ್ರಯೋಗಗಳಿಂದ ಸೊಬಗಾಗಿವೆ. ಪುರಂದರ ವಿಠಲನು ನಾಲ್ಕು ಲಕ್ಷದ ಎಪ್ಪತ್ತೈದು ಸಾವಿರ ಪದಗಳನ್ನು ರಚಿಸಿದನು, ಕಾಲು ಲಕ್ಷವನ್ನು ವಿಜಯದಾಸನು ರಚಿಸಿದನೆನ್ನುವರು. ಸಂಸ್ಕೃತದಲ್ಲಿ ಮೂವತ್ತೆರಡು ಅಕ್ಷರಗಳಷ್ಟು ಭಾಗಕ್ಕೆ ಒಂದು ಗ್ರಂಥವೆನ್ನುತ್ತಾರೆ. ರಾಮಾಯಣ 24 ಸಾವಿರ, ಭಾಗವತ 18 ಸಾವಿರ, ಭಾರತವು 1 ಲಕ್ಷ ಗ್ರಂಥವೆನ್ನುವುದು ಈ ರೀತಿಯಲ್ಲೆಂದು ಸುಪ್ರಸಿದ್ಧವಾಗಿದೆ. ಹಾಗೆಯೇ ಇವನ ಒಂದೂ ಕಾಲು ಸಾವಿರ ಪದ್ಯಗಳಲ್ಲಿ ಈ ಲೆಕ್ಕ ಪೂರ್ತಿ ಸೇರಬಹುದು!

ಹೊಸ: "ಇವನಷ್ಟು ಹರಿಕೀರ್ತನೆಗಳನ್ನು ರಚಿಸಿದ ಹರಿದಾಸನಿಲ್ಲ"ವೆಂದು

ನಿಸ್ಸಂದೇಹವಾಗಿದೆ. ಧಾರ್ಮಿಕ, ಸಾಹಿತ್ಯಕ, ಸಂಗೀತಗಳೆಂಬ ಮೂರು ತೆರದಲ್ಲಿ ತುಂಬಿದ್ದ ಪುರಂದರವಿಠಲನ ಕೀರ್ತನೆಯ ಒಂದು ಸೊಲ್ಲಾದರೂ ಕನ್ನಡದ ಜನವನ್ನು ಆಕರ್ಷಿಸದಿಲ್ಲ; ಪ್ರತಿಯೊಂದು ಸೊಲ್ಲು 'ತ್ರಿಮಧುರ'ದಂತೆ ರುಚಿ, ಹಿತಕರವೆನ್ನಲು ಅಡ್ಡಿಯಿಲ್ಲ. ಇವನ ಬಗೆಗೆ ಇವನ ಗುರುಗಳಾದ ವ್ಯಾಸರಾಯರ ಮಾತನ್ನು ಇಲ್ಲಿ ಬರೆದಿದ್ದೇವೆ:

"ನೀತಿಯಿಲ್ಲವನರಿತು ನಿಗಮವೇದ್ಯನ ನಿತ್ಯ।
ವಾತಸುತನಲ್ಲಿಹನ ವರ್ಣಿಸುತಲಿ॥
ಗೀತ ನರ್ತನದಿಂದ ಕೃಷ್ಣನ್ನ ಪೂಜಿಸುವ।
ಪೂತಾತ್ಮ ಪುರಂದರದಾಸರಿವರಯ್ಯ॥"

ಅಭ್ಯಾಸದ ಸೂಚನೆಗಳು:

1) ಭಕ್ತಿಯ ವಿಷಯ ಯಾರು ಹೇಳಿದ್ದಾರೆ?
2) ಕನ್ನಡದಲ್ಲಿ ಯಾರು ಸುಪ್ರಸಿದ್ಧ ದಾಸರುಗಳು ಇದ್ದರು?
3) ನಾಯಕನು ಹರಿದಾಸನಾಗಲು ಮುಖ್ಯ ಕಾರಣವೇನು?
4) ಇವನ ಬಗೆಗೆ ಬೇರೆ ಹೇಳಿಕೆಗಳೇನು ದೊರೆತಿವೆ?
5) ಇವನು ಏಕೆ ಸಂಚಾರ ಮಾಡಿದನು, ಹೇಗೆ?
6) ಇವನು ಸಂಗೀತಾಚಾರ್ಯನೆಂದು ಏಕೆ ಹೇಳುವುದು?
7) ಗೀತೆಗಳಲ್ಲಿ ಕಾಣುವ ಸ್ವಾರಸ್ಯಗಳೇನು?
8) ಇವನನ್ನು ಯಾರು ಬಹುಮಾನಿಸಿದ್ದಾರೆ, ಹೇಗೆ?

x

ಅಗೋಳಿ ಮಂಜಣ್ಣ.

ಒಂದು ನೂರು ವರುಷಗಳ ಹಿಂದಿನ ವರೆಗೆ ನಮ್ಮ ಗ್ರಾಮಗಳಲ್ಲಿ ಪ್ರತಿಯೊಂದು ಜಾತಿಯ, ಕಸಬಿನ ಜನರಿಗೆ ಒಬ್ಬೊಬ್ಬ ಮುಖಂಡನು ಇರುತ್ತಿದ್ದನು. ಈ 'ಗುರಿಕಾರ' ಅಥವಾ 'ಗುತ್ತಿನವ'ನು ತನ್ನ ಸಮಾಜದ ಆಗುಹೋಗುಗಳನ್ನು ವಿಚಾರಿಸುತ್ತ, ಜನರಿಂದ ಕಪ್ಪ ಕಾಣಿಕೆಗಳನ್ನು ಕೊಳ್ಳುತ್ತ, ತಮ್ಮ 'ಗ್ರಾಮಕೂಟ'ದ ಒಡೆಯನಿಗೆ ಅರ್ಪಿಸಬೇಕು. ಈ ಮುಖ್ಯಸ್ಥನಿಗೆ ತುಂಡು ಅರಸು, ಪಾಳೆಯಗಾರ, ಸಾಮಂತ, ಪ್ರತಿನಿಧಿಯೆಂದು ಹೆಸರುಗಳಿವೆ. ಇತ್ತೀಚೆಗೆ ಈ ಹಳೆಯ ತೆರದ ಆಡಳಿತೆಯು ಮಾಯವಾಗಿದೆ. ಈಗಿನ ಆಗಬೇಕೆನ್ನುವ 'ಗ್ರಾಮಪಂಚಾಯತು'ಗಳು ಬೇರೆ ತೆರದವು.

ಮಂಗಳೂರಿಂದ ಉಡುಪಿಗೆ ಹಾದು ಹೋಗುವ ಪಡು ಕರಾವಳಿಯ ರಾಜಬೀದಿಯಲ್ಲಿ ಹದಿನಾರನೆಯ ಮೈಲಿನಲ್ಲಿ ಪಾವಂಜೆ ಹೊಳೆ ಅಡ್ಡಹರಿದು, ಪಡುಕಡಲನ್ನು ಸೇರುವುದು. ಈ ಹೊಳೆಯ ಮೂಡು ಪಕ್ಕದಲ್ಲಿ 'ಚೇಳ್ಯಾರು' ಗ್ರಾಮವಿದೆ. ಈ ಗ್ರಾಮ 'ಮಾನ್ಸಡು' ಮಾಗಣೆಗೆ ಸೇರಿದುದು. ಈ ಮಾಗಣೆಯ ಮುಖ್ಯ 'ಗುತ್ತು'ಗಳಲ್ಲಿ ಒಂದು ಚೇಳ್ಯಾರು ಗ್ರಾಮದಲ್ಲಿದೆ. ಈ ಮಾಗಣೆಯಿಂದ ತೆಂಕು 'ಪಣಂಬೂರು' ಮಾಗಣೆ ಇದೆ. ಪಾವಂಜೆ ಹೊಳೆಯಿಂದ ಬಡಗಲಲ್ಲಿ 'ಮೂಲ್ಕಿ ಸೀಮೆ'ಯಿದೆ. ಇದು 'ಸಾವಂತರ' ಆಳ್ವಿಕೆಗೊಳಗಾಗಿತ್ತು.

ಚೇಳ್ಯಾರು 'ಗುತ್ತು'ಮನೆ: ಎರಡು ಮೂರು ನೂರು ವರುಷಗಳ ಹಿಂದೆ ಚೇಳ್ಯಾರು ಗುತ್ತಿನಲ್ಲಿ ಬಗ್ಗ ಅಧ್ಯಾಂತಾಯನು ಇದ್ದನು. ಅವನು ತನ್ನ ಮನೆಯ ಮುಂದುಗಡೆ ಕಂಗು ತೆಂಗುಗಳ ತೋಟಗಳನ್ನು ಬೆಳೆಸಿದ್ದನು. ಹಲವು ಹೊಲಗಳ ಸಾಗುವಳಿ ಮಾಡಿಸುತ್ತಿದ್ದನು. ಅವನ ಮನೆಯ ಹಿಂಗಡೆ ಎತ್ತರವಾದ ಗುಡ್ಡೆಯಿದೆ. ಅದರಲ್ಲಿ ಬೇಕಾದಷ್ಟು ಸೊಪ್ಪು ಸೌದೆಗಳು ಬೆಳೆದಿದ್ದವು. ಅವುಗಳನ್ನು ಕಡಿದು ತಂದು ಗದ್ದೆಗೆ ಚೆಲ್ಲಿದರೆ ಸಾಕು, ಗದ್ದೆಯ ಬೆಳೆಯು ಸಮೃದ್ಧವಾಗಿ, ಮನೆಗೆ ಸಿಗುತ್ತಿತ್ತು.

ಗದ್ದೆ ಸುತ್ತ ಹೊಲಗಳಿಗೆ ತಕ್ಕ ನೀರು ಪಕ್ಕದ ಗುಡ್ಡೆಯ ಬದಿಯಿಂದ ಇಳಿದು ಹರಿಯುತ್ತಿತ್ತು. ಬೇಸಗೆಯಲ್ಲಿ ಪಾವಂಜೆ ಹೊಳೆಗೆ ಬೇಲಿಯ ಸಮೀಪದಲ್ಲಿ ಅಡ್ಡವಾಗಿ ಒಂದು ಕಟ್ಟ ಹಾಕಿ, ಆ ನೀರನ್ನು ಕೃಷಿಗೆ ಹಾಯಿಸುತ್ತಿದ್ದರು. ಪ್ರಾಕೃತಿಕ ಸಂಪತ್ತುಗಳಿಂದ ಸಸ್ಯಗಳು ತುಂಬಿ ತೊನೆಯುತ್ತಿದ್ದುವು.

ಈ ಬೇಲಾರು ಗುತ್ತಿನ ಅಧ್ಯಂತಾಯನು ಕಾಲು ಎತ್ತರದ ಆಳು. ಗುತ್ತಿನ ಮರ್ಯಾದೆಯನ್ನು ತೋರಿಸುವ ಚಿನ್ನದ ಬಳೆಗಳು ಕೈಗಳಲ್ಲಿ ಕಂಗೊಳಿಸುತ್ತಿದ್ದುವು. ಅತ್ತಿತ್ತ ತಿರುಗಾಡುವ ಹೊತ್ತಿಗೆ ಒಂದು ಕೈಯಲ್ಲಿ ಬೆಳ್ಳಿಯ ಕಟ್ಟುಗಳುಳ್ಳ ನಿಡುಗೋಲು, ಇನ್ನೊಂದು ಕೈಯಲ್ಲಿ 'ಬಲವಸ್ತ್ರ'ವೂ ಇದ್ದುವು. ತಲೆಗೆ ಸುತ್ತಿದ 'ಮುಂಡಾಸು' ಪಟ್ಟೆಯ ನಡುಕೆಂಬಣ್ಣದ ಚೌಕುಳಿಯಿಂದ ಎದ್ದು ಕಾಣುತ್ತಿತ್ತು. ಕಿವಿಗಳಲ್ಲಿ ಹೊಳೆಯುವ ಎರಡು ಮೂರು ತೆರದ 'ಒಂಟಿ' ಹರಳದವು; ಹೆಗಲಲ್ಲಿ ಇಳಿಬಿಟ್ಟ ಜರಿಯ ಶಾಲು ಬಲು ದೂರದ ತನಕ ಕಾಣುತ್ತಿದ್ದುವು. ನಾಲ್ಕೈದು ಮೊಳದ ಪಂಚೆಯನ್ನು ಸೊಂಟಕ್ಕೆ ಸುತ್ತಿ, ಅದರ ಮೇಲೆ ಬೆಳ್ಳಿಯ ಉಡಿದಾರವೂ ಇತ್ತು. ನಡುವಿನಲ್ಲಿ ಸಿಕ್ಕಿಸಿದ ಬೀಗದ ಕೈಗಳ ಗೊಂಚಲು ಅವನ 'ಯಜಮಾನಿಕೆ'ಯನ್ನು ಸಾರಿಸುತ್ತಿತ್ತು. ಕಾಲಿಗೊಂದು ಬೆಳ್ಳಿಯ ಬಳೆಯಿತ್ತು. ಎತ್ತುಗಳ ತೊಗಲಿಂದ ಹೊಲಿದ ದಪ್ಪವಾದ ಮೆಟ್ಟುಗಳನ್ನು ಒತ್ತಿ ನಡೆಯುವಾಗ ಕೇಳುವ ಸಪ್ಪಳ 'ಗುತ್ತಿನವನು ಬಂದನೆಂದು' ಸಾರುವಂತಿತ್ತು.

ನಡುಹರೆಯದ ಬಗ್ಗ ಅಧ್ಯಂತಾಯನು ಬಹಳ 'ಜಬರ'ದಿಂದ ನಡೆದಂತೆ ಕಾಣುತ್ತಿದ್ದರೂ, 'ತಾನು ಬಂಟರ ಗುತ್ತಿನವ'ನೆಂಬ ಯಾವ ಹೆಮ್ಮೆಯೂ ಆತನಲ್ಲಿ ಇರಲಿಲ್ಲ. ತನ್ನ ಸಮಾಜದವರನ್ನು, ಬೇರೆ ಸಮಾಜದವರನ್ನು ತಮ್ಮವರೆಂದೇ ಭಾವಿಸುತ್ತಿದ್ದನು. ಹೀಗಾಗಿ 'ಇದ್ದರೆ ಇಂತಹ ಗುತ್ತಿನವನು ಇರಬೇಕೆಂದು' ಬೇರೆಯ ಜನರು ಆಡಿಕೊಳ್ಳುತ್ತಿದ್ದರು.

ಅಧ್ಯಂತಾಯನು 'ಅತಿ'ಗೆ ಹೋಗದೆ, 'ಇತಿ'ಗೆ ಇಳಿಯದೆ, 'ಮಿತಿ'ಯಿಂದ ಪ್ರಾಚೀನ ಪದ್ಧತಿಯನ್ನು ಆಚರಿಸುತ್ತಿದ್ದನು. ಅವನು ಮುದುಕನಾಗುತ್ತಾ ಬಂದನು. ಆದರೆ ಗುತ್ತಿನ ಯಜಮಾನಿಕೆಯನ್ನು ವಹಿಸುವುದಕ್ಕೆ ತಕ್ಕ ಸಂತತಿಯೇ ಹುಟ್ಟಿರಲಿಲ್ಲ.



ಅಗೋಳಿ ಮಂಜಣ್ಣ

ದಕ್ಷಿಣ ಕನ್ನಡ ಜಿಲ್ಲೆಯ ತುಳುವರಲ್ಲಿ 'ಅಳಿಯ ಸಂತಾನ ಕ್ರಮ' ಬಳಕೆಯಲ್ಲಿತ್ತು. ಇದು ಅಶೋಕ ಮಹಾರಾಜನ ಕಾಲದಿಂದಲೂ ಇಲ್ಲಿ ನಡೆದು ಬರುತ್ತಿತ್ತೆಂದು ಹೇಳುವರು. ಇತ್ತೀಚೆಗೆ 'ಮಕ್ಕಳ ಸಂತತಿಯ ಕ್ರಮ'ವೇ ತುಳುವರಿಗೆ ಕಾನೂನು ಮೇರೆಗೆ ಬಂದಿದೆ.

ಹುಟ್ಟು: ಈ ಬಗ್ಗ ಅದ್ಯಂತಾಯನ ಒಬ್ಬಳೇ ತಂಗಿ ದುಗ್ಗು ಸೆಟ್ಟಿತಿಯು 'ಕಲ್ಲ'ದ ಬ್ಯಾಕೆಮನೆಯ ನಾರಾಯಣ ಸೆಟ್ಟರನ್ನು ಮದುವೆಯಾಗಿದ್ದಳು. ಅವಳಿಗೂ ಹಲವು ವರುಷಗಳ ತನಕ ಸಂತತಿಯಾಗಲಿಲ್ಲ. ಹೀಗಾಗಿ ಬಗ್ಗ ಅದ್ಯಂತಾಯನು ಬಹಳ ಚಿಂತೆಗೆ ಒಳಗಾದನು. ತನ್ನ ಮನೆಗೆ ದೈವಗಳಿಗೆ ಮಾತ್ರವಲ್ಲ, ಮಾವಿನಕಟ್ಟೆಯ ಬಪ್ಪನಾಡು ದೇವರಿಗೂ ಹರಕೆ ಹೊರುವೆನೆಂದು ಬೇಡಿಕೊಂಡನು. ಬಪ್ಪನಾಡಿನ ದುರ್ಗಾಂಬಿಕೆಯು ಈ ದುಗ್ಗು ಸೆಟ್ಟಿತಿಗೆ ಅನುಗ್ರಹಿಸಿದ ಕಂಡಳು, ಒಂದೇ ವರುಷದೊಳಗೆ 'ದುಗ್ಗ ಹೆಂಗಸು' ಒಂದು ಗಂಡು ಮಗುವನ್ನು ಹೆತ್ತಳು. ಮಗುವು ಹುಟ್ಟಿದಾಗ ಮೈಯಲ್ಲಿ ಅಷ್ಟು ಗಟ್ಟಿಮುಟ್ಟಾಗಿರಲಿಲ್ಲ. ದೇವಿಯ ತೀರ್ಥಗಂಧಗಳಿಂದಲೂ, ಮದ್ದು ಮಾಟಗಳಿಂದಲೂ ನಾಲ್ಕಾರು ತಿಂಗಳಲ್ಲಿ ಪುಷ್ಟವಾಗಿ ಬೆಳೆಯಿತು. 'ಮಂಜಣ್ಣ'ನು ಮೈತುಂಬಿ ಭೀಮನಂತೆ ಇದ್ದನು!

ಮಂಜಣ್ಣನು ಕಲ್ಲ ಮತ್ತು ಬೋಳಾರು ಮನೆಗಳ ಒಂದೇ 'ಕುಡಿ'ಯಾಗಿದ್ದನು. ಇವನಿಂದಾಗಿ ಅವೆರಡು ಮನೆಗಳಲ್ಲಿ ಸಂತಸ ಉಕ್ಕಿ ಹರಿಯುತ್ತಿತ್ತು. ಇವನನ್ನು ಬಲು 'ಮೋಕೆ'ಯಿಂದ ಸಾಕಿದರು. ಕೆಲಸದ ಆಳುಗಳು 'ಮಗುವೆಂದರೆ ದೇವರೆಂದು' ಭಾವಿಸುತ್ತಿದ್ದರು. 'ನೆಲದಲ್ಲಿಟ್ಟರೆ ಇರುವೆ ಮುತ್ತುವುದು, ತಲೆಯಲ್ಲಿಟ್ಟರೆ ಹಕ್ಕಿ ಒಯ್ಯುವುದು' ಎಂಬಷ್ಟು ಎಲ್ಲರೂ ಲಾಲಿಸುತ್ತಿದ್ದರು.

ಬಾಲ್ಯ: ಇಂದಿನಂತೆ ಅಂದು ಹಳ್ಳಿಗಳಲ್ಲಿ ಎಲ್ಲರಿಗೂ ವಿದ್ಯಾಭ್ಯಾಸ ಮಾಡಲಾಗುತ್ತಿದ್ದಿಲ್ಲ. ಹಾಗಾಗಿ ಮಂಜಣ್ಣನಿಗೂ ಓದು ಬರೆಹಗಳ ಸೌಕರ್ಯವಿರಲಿಲ್ಲ. ಆದರೆ ಇವನು ಚುರುಕು ಬುದ್ಧಿಯವನಾಗಿದ್ದನು. ಹುಟ್ಟೂರಿನ ಮಕ್ಕಳಿಗೆಲ್ಲ ರಾಜನಂತೆ ಮೆರೆದು ಆಟವಾಡುತ್ತಿದ್ದನು. ಹಾಯುವ ಎತ್ತು ಕೋಣಗಳು ಇವನನ್ನು ಕಂಡರೆ ತಾವಾಗಿ ತಲೆ ಬಗ್ಗಿಸುತ್ತಿದ್ದುವು. ನಾಗುಪ್ಯಾನೆ ಪ್ರವೇಶಿಸಿದ ಪ್ರತೆದಲ್ಲಿ ನಾಲ್ಕಾರು ಮಂದಿಗೂ ಎತ್ತಲಾಗದ ದೊಡ್ಡ ನೀರಿನ ಮರಿಗೆಯನ್ನು ಇವನೊಬ್ಬನೇ ಎತ್ತಿ ಹಿಡಿಯುತ್ತಿದ್ದನು. ಬಿಡುವ ಹೊತ್ತಿನಲ್ಲಿ

ಕಾಲ್ಚೆಂಡು, 'ತಪ್ಪಂಗಾಯಿ'ಗಳನ್ನು ಆಡುತ್ತಿದ್ದನು. ಸುತ್ತಿಟ, ಚಿನಿದಾಂಡು ಮೊದಲಾದವುಗಳಲ್ಲಿ ಈ ಮಂಜಣ್ಣನನ್ನು ಮೀರಿಸುವವರು ಯಾರೂ ಇದ್ದಿಲ್ಲ. ಇಂತಹ ಮೈದುಡಿಗೆಗಳಿಗನುವಂತೆ, ತಿಂಡಿಗಳ ತಿಂಬಾಟದಲ್ಲೂ ಮಂಜಣ್ಣನು ಹಿರಿಸ್ಥೆಯಾಗಿದ್ದನು. ಎಂಟು ಹತ್ತು ಜನ ತಿನ್ನಬಹುದಷ್ಟು ಅವಲಕ್ಕಿ ಹುರಿಯಕ್ಕಿ ಎಳನೀರು ಬೆಲ್ಲ ಕಾಯಿಗಳನ್ನು ಕೂತು ಹುಟ್ಟುವುದರೊಳಗೆ ತಿನ್ನುತ್ತಿದ್ದನು. ಇವನ್ನೆಲ್ಲಾ ನೋಡಿ ಜನರು 'ಇವನೊಬ್ಬ ಅಗ್ಗೊಳಿ'ಯೆಂದು ಆಡತೊಡಗಿದರು. 'ಅಗ್ಗೊಳಿ'ಯೆಂದರೆ ದೊಡ್ಡ ಪಾತ್ರೆಯೆಂದೂ, ಹಡಗು ಎಂದೂ ಅರ್ಥ. ಅಂದಿನಿಂದ 'ಅಗ್ಗೊಳಿ ಮಂಜಣ್ಣ'ನೆಂದೇ ಊರಲ್ಲಿ ಹೆಸರು ಹೊಂದನು!

ಇವನು ಹದಿನಾಲ್ಕರ ಹರೆಯಕ್ಕೆ ಬಂದಾಗ ಚೌಗುತ್ತಿನ ಹಿರಿಯಲು ತೊಡಗಿದನು. ಗಡಿಗೋಳಗಳ ಸಾಕಾಣಿಯೂ, ಗದ್ದೆ ಸಾಗುವಳಿಯ ಮೇಲುನೋಟಗಳೂ ಇವನ ಪಾಲಿಗೆ ಬಂದವು.

ಒಮ್ಮೆ ಮಾಲಿಕೆಯ ಸಾಮಂತನು ತನ್ನ ಊರಲ್ಲಿ ಕೋಣಗಳ 'ಕಂಬಳ' ಮಾಡಿಸಬೇಕೆಂದು ಯೋಚಿಸಿದನು. ನೆರೆಯ ವರಾಂಬಾರಿನಲ್ಲಿ ನಡೆಯುವ ಕಂಬಳವನ್ನು ತನ್ನಲ್ಲಿಗೆ ಬರಿಸಲು ನಿರ್ಧರಿಸಿದನು. ಈ ಸಂಗತಿ ವರಾಂಬಾರಿನವರಿಗೆ ತಿಳಿಯಿತು. ಎರಡು ಕಡೆಯವರೂ ಬೆಳ್ಗಾರಿನಲ್ಲಿ ಸಂಧಿಸುತ್ತಿದ್ದರು. ಈ ಹೊತ್ತಿಗೆ ಅಗ್ಗೊಳಿ ಮಂಜಣ್ಣನು ತಾನಾಗಿ ವರಾಂಬಾರಿನ ಆಳುಗಳನ್ನು ಗೆದ್ದಿದ್ದನು. ಅದರಿಂದ ಮಾಲ್ಕಿಯವರು ವರಾಂಬಾರಿಗೆ ಹೋಗಿ, ಕಂಬಳದ ಗದ್ದೆಯ ಹಿಡಿ ಮಣ್ಣನ್ನು ಬಟ್ಟೆಯಲ್ಲಿ ಕಟ್ಟಿಕೊಂಡು, ಮಾಲ್ಕಿಯಲ್ಲಿದ್ದ ಗದ್ದೆಗೆ ಚೆಲ್ಲಿದರು. ಅಂದಿನಿಂದ 'ಅರಸು ಕಂಬಳ' ಪ್ರತಿವರ್ಷ ನಡೆಯತೊಡಗಿತು. ಇದೀಗಲೂ ಬಹಳ ಗದ್ದಲದಿಂದ ನೆರವೇರುವುದು. ಮಾಲ್ಕಿಯಲ್ಲಿ ಸಾಮಂತನು ಮಾಡಿಸತೊಡಗಿದ್ದ ಕಂಬಳವೂ ವರಾಂಬಾರಿನ ಕಂಬಳವೂ ಒಂದೇ ದಿನವಿದ್ದಿರಬಾರದು; ಅದು ಕಾರಣ ಆ ಗದ್ದೆಯ ಮಣ್ಣನ್ನು 'ಕೋರಿಕೊಂಡು' ಹೋದ ಮಾಲ್ಕಿಯವರೇ ಗೆದ್ದರೆಂದೂ, ವರಾಂಬಾರಿನ ಕಂಬಳ ಅದರಿಂದಾಗಿ ನಡೆಯುತಿಲ್ಲೆಂದೂ ಹೇಳುವುದಕ್ಕೆ ಇದೆ.

ಹರಕೆ: ದುಷ್ಟ ಹೇಳ್ದದ ಹರಕೆಯಿಂದ ಮಂಜಣ್ಣನಿಗೆ ಹುಟ್ಟಿದವನಲ್ಲ! ದೇವಿಯ ಹರಕೆಯನ್ನು ಸಲಿಸಬೇಕೆಂದು

ತಾಯಿ ಮಗನಿಗೆ ಹೇಳಿದಳು. ಅದೇ ರಾತ್ರಿ ಮಂಜಣ್ಣನಿಗೆ ದೇವಿಯು ಕನಸಿನಲ್ಲಿ ಬಂದು, ಹರಕೆಯನ್ನು ಕೇಳಿದಂತಾಗಿತ್ತು. ಮರುದಿನವೇ ಬಪ್ಪನಾಡು ದೇವಳಕ್ಕೆ ಮಂಜಣ್ಣನು ನಡೆದನು. ಅಲ್ಲಿಯ ಕೆರೆಯಲ್ಲಿ ಮಿಂದು ಮಡಿಯಾಗಿ, ದೇವಿಯ ಪೂಜೆಯನ್ನು ಭಕ್ತಿಯಿಂದ ನೋಡಿದನು. ಪೂಜೆಯಾದ ಮೇಲೆ ಅರ್ಚಕರು ಪ್ರಸಾದಕೊಟ್ಟು, ಮಂಜಣ್ಣನಂತೆ ತನಗೂ ಕನಸಾಗಿತ್ತೆಂದೂ, ದಂಬೆಕಲ್ಲಿನ ಸಾಗಾಟದ ಸೇವೆಯನ್ನು ಒಪ್ಪಿಸಬೇಕೆಂದೂ ಸೂಚಿಸಿದರು. ದೇವಾಲಯದ ಉತ್ಸವದಲ್ಲಿ ಧ್ವಜಸ್ತಂಭ(ಕೊಡಿಮರ)ವನ್ನು ನಿಲ್ಲಿಸುವ ಕಲ್ಲಿಗೆ "ದಂಬೆಕಲ್ಲು' ಎನ್ನುತ್ತಾರೆ. ಎರ್ಮಾಳು ದೇವಳದಲ್ಲಿದ್ದ ಒಂದು ಕಲ್ಲು ಅದಕ್ಕೆ ತಕ್ಕುದಾಗಿದೆಯೆಂದು ತಿಳಿದ ಮಂಜಣ್ಣನು ಪಟ್ಟನೆ ಹೊರಟನು.

ಮೂಲ್ಕಿಯಿಂದ ಬಡಗು ಪಡುಬಿದರೆ, ಅಲ್ಲಿಂದ ಉತ್ತರಕ್ಕೆ ಎರ್ಮಾಳು ಇದೆ. ಅಲ್ಲಿ ಹೆಗ್ಗಡೆಯ ಬೀಡು ಇತ್ತು. ಆ ಹೆಗ್ಗಡೆಯನ್ನು ಮೂಲ್ಕಿಯ ಸಾವಂತನು ದೂರುತ್ತಿದ್ದನಂತೆ. ಇದೀಗ ದಂಬೆಕಲ್ಲು ತರುವಂತೆ ಕೇಳಿದುದೂ ಸಾವಂತನಿಗೆ ಬೇಕೆಂದು ಹೆಗ್ಗಡೆ ತಿಳಿದನು. ಮಂಜಣ್ಣನನ್ನು ತಡೆಯಲು ಆಳುಗಳನ್ನು ನಿಯಮಿಸಿದ್ದನು. ಅವರಿಗೂ ಮಂಜಣ್ಣನಿಗೂ ಹೋರಾಟವಾಗಿ, ಅವರೆಲ್ಲ ಸೋತರು. ಅಯ್ವತ್ತು ಮಂದಿ ಹೊರಲಾರದಷ್ಟು ಭಾರದ ಆ ಕಲ್ಲನ್ನು ಇವನೊಬ್ಬನೇ ಎತ್ತಿ ತಲೆಯಲ್ಲಿ ಹೊತ್ತು ಬಪ್ಪನಾಡಿಗೆ ಬಂದನು. ಇದೆಲ್ಲ ಸಂಗತಿಗಳನ್ನು ತಿಳಿದ ಸಾವಂತನು ಮಂಜಣ್ಣನಿಗೆ ಬಹುಮಾನಿಸಿದನು.

ಮಂಜಣ್ಣನು ಮಾವನಾದ ಬಳಿಕ ಸ್ವರ್ಗಸ್ಥನಾದ ಮೇಲೆ, ಆ ಗುತ್ತಿನ ಭೂತದ ಸೇವೆಗೆ 'ಗಡಿ'ಯವನಾದನು. ಗುತ್ತಿನ ಯಜಮಾನಿಕೆಯನ್ನು ತಾಯಿಯ ಆದೇಶದಂತೆ ನಡೆಸುತ್ತಿದ್ದನು. ಇವನ ಒಂದು ಮಾತನ್ನು ಇಂದಿಗೂ ಆಡುವರು:

"ಕಾರ್ಲದ ಬಾಕ್ಯಾರ್ ಕಂಗಾ ಆವೊಡ್, ಕೊಡಂಜದ ಕಲ್ಲ್ ಉದಾಲ್ಗೆ ಆವೊಡ್, ಗುಜ್ಜರ ಕೆರೆ ಪೇರ್ ಆವೊಡ್, ಎನ್ನ ಅಪ್ಪೆ ದುಗ್ಗೆ ಬಾಳೊಡು, ಮಗೆ ಮಂಜಣೆ [illegible]ಡ್". (ಕಾರ್ಕಳದ 'ಬಾಕಿಮಾರು'ಗದ್ದೆ ಬಟ್ಟಲಾಗಬೇಕು, ಕೊಡಂಜ ಗುಡ್ಡದ ಕಲ್ಲು ಕಡುಬಾಗಬೇಕು, ಗುಜರಕೆರೆ ಹಾಲಾಗಬೇಕು, ನನ್ನ ತಾಯಿ ಬದುಕಬೇಕು, ಮಗ ಮಂಜಣ್ಣ ಉಣ್ಣಬೇಕು.)

ಅಗ್ಯ ಮಂಜಣ್ಣನು ಸಂದು ಎರಡು-ಮೂರು ನೂರು ವರುಷಗಳಾಗಿ ರಬಹುದು. ಆತನ ಕೆಲವು ಉಡುಪುಗಳು ಈಗಲೂ ಇವೆಯಂತೆ. ~~[illegible]~~ ಮೈದುಡಿಮೆಯವರು ಇದ್ದರೆ 'ಇವನೇನು ಅಗ್ಯ ಮಂಜಣ್ಣನೋ?' ಎಂಬ ಮಾತು ಜನರಲ್ಲಿ ರೂಢವಾಗಿದೆ. ನಾವು ಕೆಚ್ಚೆದೆ ಯುವಕರಾಗಿ, ಕನ್ನಡದೇವಿಯ ಬಂಟರಾಗಿ, ಸಾಹಸಿಗರಾಗಿ ಬಾಳಲು ನಾಡಿನ 'ವೀರರ ಕತೆ'ಗಳು ಆದರ್ಶಗಳಾಗಿವೆ!

ಅಭ್ಯಾಸದ ಸೂಚನೆಗಳು:

1) ಹಿಂದಿನ ಕಾಲದಲ್ಲಿ ಗ್ರಾಮದ ಆಡಳಿತ ಹೇಗಿತ್ತು?
2) ಬೆಳ್ಳಾರು ಸುತ್ತಿನ ಸಾಮ್ರಾಜ್ಯ ಹೇಗಿತ್ತು?
3) ಮಂಜಣ್ಣನು ಎಲ್ಲಿ ಹುಟ್ಟಿದ್ದನು, ಹೇಗೆ?
4) ಇವನ ಬಾಲ್ಯದ ವಿಶೇಷತೆಗಳೇನು?
5) ಮೂಲ್ಯೆಯ ಕಂಬಳ ಹೇಗೆ ತೊಡಗಿತ್ತು?
6) 'ಕಂಬಳ'ದ ವಿಷಯದಲ್ಲಿ ಚಿಕ್ಕ ಪ್ರಬಂಧ ಬರೆಯಿರಿ.
7) ಹರಕೆಯನ್ನು ಮಂಜಣ್ಣನು ಹೇಗೆ ಸಾಧಿಸಿದ್ದನು?
8) ಈ ಮಂಜಣ್ಣನ ನೆನಪು ಯಾವುದರಿಂದ ಉಳಿದಿದೆ?

x ——— x ——— x ——— x